ಅರಸೀಕೆರೆ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯದಲ್ಲಿ

ಸಿ.ಸಿ. ನಂಃ **424/22**

| | | | |
|---|---|---|---|
| ಸಾಕ್ಷಿದಾರರ ಹೆಸರು | ಸಂಜಯ್ | ಸಿ.ಡಬ್ಲ್ಯೂ- | 2 |
| ತಂದೆ/ಗಂಡನ ಹೆಸರು | ಪೀಟರ್ | ಪಿ.ಡಬ್ಲ್ಯೂ | 2 |
| ವಯಸ್ಸು | 21 ವರ್ಷ | ಪ್ರಮಾಣ ವಚನ ಭೋಧಿಸಿದ ದಿನಾಂಕ | |
| ವೃತ್ತಿ | ಸ್ಟೂಡೆಂಟ್ | | |
| ವಾಸ | ಅರಸೀಕೆರೆ | 02.07.2025 | |

ಮುಖ್ಯ ವಿಚಾರಣೆ ಸಸಅ ರವರಿಂದಃ-

ದಿಃ11-06-2021 ರಂದು ಹಾಸನ ರಸ್ತೆ ಬಲಭಾಗದ ಮಸೀದಿಯ ಬಳಿ ರಾತ್ರಿ 8-50 ಗಂಟೆ ಸಮಯದಲ್ಲಿ ನಾನು ಅಂಗಡಿಗೆ ಹೋಗುತ್ತಿದ್ದಾಗ ಪೋಲೀಸರು ನನ್ನನ್ನು ಕರೆದರು. ಪೋಲೀಸರು 2-3 ಜನರನ್ನು ಹಿಡಿದು ಅವರು ಗೇಮ್ ಆಡುತ್ತಿದ್ದಾರೆಂದು ಸಾಕ್ಷಿಯಾಗಿ ಸಹಿ ಮಾಡು ಎಂದು ಹೇಳಿದರು. ಆ 2-3 ಜನರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಿದ್ದು ಅವರ ಪರ ವಕೀಲರು ಅವರ ಗುರುತಿಸುವಿಕೆಯ ಬಗ್ಗೆ ತಕರಾರು ಮಾಡಿರುವುದಿಲ್ಲ. ಸಾಕ್ಷಿಗೆ ನಿಪಿ-1 ನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಪೋಲೀಸರು ಆರೋಪಿತರಿಂದ ಒಟ್ಟು 1250 ರೂ.ಗಳನ್ನು, ಚೀಟಿಯನ್ನು, ಪೆನ್ನನ್ನು ವಶಪಡಿಸಿಕೊಂಡರು. ಸಾಕ್ಷಿ ಮು.ಮಾ-1 ರಿಂದ 3 ನ್ನು ನೋಡಿ ಗುರುತಿಸುತ್ತಾರೆ. ಪೋಲೀಸರು ಒಂದು ಖಾಲಿ ದಾಖಲೆಗೆ ನನ್ನ ಸಹಿ ಮಾಡಿಸಿಕೊಂಡು ಕಳುಹಿಸಿಕೊಟ್ಟರು. ಪೋಲೀಸರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ.

(ಈ ಹಂತದಲ್ಲಿ ಎಪಿಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸಸಅ ರವರಿಂದಃ-

ಆ ದಿನ ಪೋಲೀಸರು ನಿಪಿ-1 ರಂತೆ ಮಹಜರ್ ಮಾಡಿ ಮು.ಮಾ-1 ರಿಂದ 3 ನ್ನು ಅಮಾನತ್ತುಪಡಿಸಿಕೊಂಡು ನನ್ನ ಸಮಕ್ಷಮ ಮಹಜರ್ ಕ್ರಮ

ಜರುಗಿಸಿರುತ್ತಾರೆಂದರೆ ಸರಿ. ನನ್ನ ಜೊತೆ ಚಾಸಾ-3 ರವರು ಪಂಚರಾಗಿದ್ದು ಆತನೂ ಕೂಡ ನಿಪಿ-1 ಕ್ಕೆ ಸಹಿ ಮಾಡಿರುತ್ತಾನೆ. ಪೋಲೀಸರು ನನಗೆ ಹಾಗೂ ಚಾಸಾ-3 ರವರಿಗೆ ಕೃತ್ಯದ ಬಗ್ಗೆ ಮಾಹಿತಿ ತಿಳಿಸಿ ಪೋಲೀಸ್ ಠಾಣೆಯಿಂದಲೇ ಅವರ ವಾಹನದಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಅವರ ಜೊತೆ ಸ್ವಲ್ಪ ದೂರದಲ್ಲಿ ನಿಂತು ನೋಡಿದಾಗ 1 ನೇ ಆರೋಪಿ 1 ರೂ. ಗೆ 70 ರೂ ಗಳನ್ನು ಕೊಡುತ್ತೇನೆಂದು ಸಾರ್ವಜನಿಕರಿಗೆ ಆಮಿಷ ಒಡ್ಡಿ ಹಣ ಪಡೆದು ಚೀಟಿ ಬರೆದುಕೊಡುತ್ತಿರುವುದನ್ನು ನಾನು ನೋಡಿರುತ್ತೇನೆಂದರೆ ಸರಿಯಲ್ಲ. ಆತನನ್ನು ವಿಚಾರಣೆ ಮಾಡಿದಾಗ ಆತನ ಹೆಸರು ಮೊಹಮ್ಮದ್ ಇರ್ಫಾನ್ ಎಂದು ಹೆಸರು ಹೇಳಿದ ಎಂದರೆ ಸರಿ. ಆತನ ಬಳಿ ಮಟ್ಕಾ ಜೂಜಾಟದ ಬಗ್ಗೆ ಯಾವುದೇ ಪರವಾನಗೆ ಇರಲಿಲ್ಲ ಎಂದು ಹೇಳಿದ ಎಂದರೆ ನನಗೆ ಗೊತ್ತಿಲ್ಲ. ಆತನನ್ನು ವಿಚಾರಿಸಲಾಗಿ 2 ನೇ ಆರೋಪಿಯ ಬಗ್ಗೆ ಹೇಳಿ ತಾನು ಪಡೆದ ಹಣವನ್ನು ಆತನಿಗೆ ಕೊಡುತ್ತಿದ್ದೆ ಎಂದು ಹೇಳಿದ ಎಂದರೆ ಸರಿಯಲ್ಲ. 1 ನೇ ಆರೋಪಿಯನ್ನು ಪೋಲೀಸರು ವಶಕ್ಕೆ ಪಡೆದು ಆತನಿಗೆ ಮು.ಮಾ-1 ರಿಂದ 3 ವಶಪಡಿಸಿಕೊಂಡು ನಿಪಿ-1 ರಂತೆ ಮಹಜರ್ ಮಾಡಿದ ನಂತರ ಮಹಜರ್ ಗೆ ಸಹಿ ಮಾಡಿರುತ್ತೇನೆಂದರೆ ಸರಿ. ಮಹಜರ್ ಮಾಡಿದಾಗ ರಾತ್ರಿ8-00 ರಿಂದ 9-00 ಗಂಟೆಯಾಗಿತ್ತು ಎಂದರೆ ಸರಿ. ಆ ಸಮಯದಲ್ಲಿ ಚಾಸಾ-4 ರವರು ಅಲ್ಲಿಗೆ ಬಂದು ತಾನು 1 ನೇ ಆರೋಪಿಗೆ ಹಣ ಕಟ್ಟಿ ಮೋಸ ಹೋಗಿರುತ್ತೇನೆಂದು ಪೋಲೀಸರಿಗೆ ತಿಳಿಸಿದ ಎಂದರೆ ಸರಿ. ನಾನು ಈ ವಿಚಾರವನ್ನು ಪೋಲೀಸರಿಗೆ ಹೇಳಿರುತ್ತೇನೆಂದರೆ ಸರಿ.

<u>ಪಾಟೀ ಸವಾಲುಃ ಶ್ರೀ ಓ.ಎ.ಎಸ್. ವಕೀಲರಿಂದಃ-</u>

ನಾನು ಹಾಸನ ರಸ್ತೆಯಲ್ಲಿದಾಗ ಪೋಲೀಸರು ಸಹಿ ಮಾಡು ಎಂದು ಹೇಳಿದ್ದಕ್ಕೆ ಮಾಡಿರುತ್ತೇನೆಂದರೆ ಸರಿ. ಆ ಸ್ಥಳದ ಸುತ್ತ ಮುತ್ತ ಸಾಕಷ್ಟು ಅಂಗಡಿಗಳು ಇವೆ ಎಂದರೆ ಸರಿ. ಆಗ ಕತ್ತಲಾಗಿದ್ದರಿಂದ ಜನರು ಯಾರು ಓಡಾಡುತ್ತಿರಲಿಲ್ಲ. ಆ ಸ್ಥಳದಲ್ಲಿ **10-15** ಜನರು ಇದ್ದರು. ಆ ಜನರನ್ನು ಪೋಲೀಸರು ಮಹಜರ್ ಗೆ ಸಹಿ ಮಾಡುವಂತೆ ಕರೆದಿರಲಿಲ್ಲ. ಪೋಲೀಸರು ಒಂದು ಖಾಲಿ ದಾಖಲೆಗೆ ಸಹಿ ಮಾಡು ಎಂದು ಹೇಳಿದ್ದಕ್ಕೆ ಮಾಡಿರುತ್ತೇನೆಂದರೆ ಸರಿ. ನಾನು ಆ ಸ್ಥಳಕ್ಕೆ ಹೋಗುವ ಮುಂಚೆ ಪೋಲೀಸರು

ಮು.ಮಾ-1 ರಿಂದ 3 ನ್ನು ತನ್ನ ವಶಕ್ಕೆ ಪಡೆದು ಈ ರೀತಿ ವಶಪಡಿಸಿಕೊಂಡಿರುತ್ತೇವೆಂದು ಹೇಳಿ ನನ್ನ ಸಹಿ ಪಡೆದುಕೊಂಡರು. ಪೋಲೀಸರು 1 ನೇ ಆರೋಪಿ ಬಳಿಯಿಂದ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಚಾಸಾ-1 ರಿಂದ 3 ಹಾಜರಿರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ.ದಿ: 02-07-2025.

<u>ಅರಸೀಕೆರೆ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯದಲ್ಲಿ</u>

<u>ಸಿ.ಸಿ. ನಂಃ **424/22**</u>

| | | | |
|---|---|---|---|
| ಸಾಕ್ಷಿದಾರರ ಹೆಸರು | ಚಾಂದ್ ಪಾಷ | ಸಿ.ಡಬ್ಲ್ಯೂ- | 4 |
| ತಂದೆ/ಗಂಡನ ಹೆಸರು | ಸೈಯದ್ ಗೌಸ್ ಪೀರ್ | ಪಿ.ಡಬ್ಲ್ಯೂ | 3 |
| ವಯಸ್ಸು | 30 ವರ್ಷ | ಪ್ರಮಾಣ ವಚನ ಭೋಧಿಸಿದ ದಿನಾಂಕ | |
| ವೃತ್ತಿ | ಆಟೋ ಚಾಲಕ | | |
| ವಾಸ | ಅರಸೀಕೆರೆ | 02.07.2025 | |

<u>ಮುಖ್ಯ ವಿಚಾರಣೆ ಸಸಅ ರವರಿಂದಃ-</u>

1 ನೇ ಆರೋಪಿಯ ಪರಿಚಯ ಇದೆ. 2 ನೇ ಆರೋಪಿ ಗೊತ್ತಿಲ್ಲ. ದಿಃ11-06-2022 ರಂದು ಸಂಜೆ 6-30 ರಿಂದ 7-00 ಗಂಟೆ ಸಮಯದಲ್ಲಿ ಆಟೋದಲ್ಲಿ ಹಾಸನ ರಸ್ತೆ, 8 ನೇ ಕ್ರಾಸ್ ನಲ್ಲಿ ಹೋಗುತ್ತಿದ್ದಾಗ ಪೋಲೀಸರು ಒಂದು ದಾಖಲೆಗೆ ನನ್ನ ಸಹಿ ಪಡೆದಿದ್ದರು. ಅಲ್ಲಿ ಪೋಲೀಸರು ಮತ್ತು ಇತರೆ ಜನರು ಗುಂಪಾಗಿ ನಿಂತಿದ್ದು 1 ನೇ ಆರೋಪಿಯ ಬಳಿ 1 ಚೀಟಿ, ಪೆನ್ನು ಹಾಗೂ ಹಣ ಇತ್ತು. ಸಾಕ್ಷಿ ಮು.ಮಾ-1 ರಿಂದ 3 ನ್ನು ನೋಡಿ ಗುರುತಿಸಿರುತ್ತಾರೆ. ನಾನು 1 ನೇ ಆರೋಪಿಗೆ ಹಣ ಕಟ್ಟಿ ಮಟ್ಕಾ ಜೂಜಾಟ ಆಡುತ್ತಿದ್ದೆ ಎಂದರೆ ಸರಿಯಲ್ಲ. ಅಲ್ಲಿ ಪೋಲೀಸರು ನಿಪಿ-1 ರಂತೆ ಮಹಜರ್ ಕ್ರಮ ಜರುಗಿಸಿ ಮು.ಮಾ-1 ರಿಂದ 3 ನ್ನು ವಶಪಡಿಸಿಕೊಂಡ ನಂತರ ನಾನು ಪೋಲೀಸರಿಗೆ 1 ನೇ ಆರೋಪಿಗೆ ಹಣ ಕಟ್ಟಿ ಮೋಸ ಹೋಗಿರುತ್ತೇನೆಂದರೆ ಸರಿಯಲ್ಲ. ಪೋಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಎಪಿಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸಸಅ ರವರಿಂದಃ-</u>

ನಂತರ ---------------------------- ತನ್ನ ಹೇಳಿಕೆ ನೀಡಿರುತ್ತೇನೆಂದು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-2

ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ ಎಸ್.ಜಿ.ಎಂ. ವಕೀಲರಿಂದಃ-

ಅಲ್ಲಿ ಜನ ನಿಂತಿದ್ದರಿಂದ ನಾನು ಅಲ್ಲಿಗೆ ಹೋಗಿದ್ದೆ ಅಲ್ಲಿ ಏನು ಘಟನೆ ನಡೆಯಿತು ಎಂದು ಗೊತ್ತಿಲ್ಲ. 1 ನೇ ಆರೋಪಿಯ ಬಳಿ ಎಷ್ಟು ಹಣ ಇತ್ತು ಚೀಟಿ ಯಲ್ಲಿ ಏನು ಬರೆಯಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಪೋಲೀಸರು ನನ್ನ ವಿಳಾಸ ತಿಳಿದುಕೊಂಡು ಅಲ್ಲಿಂದ ಕಳುಹಿಸಿಕೊಟ್ಟರು ಎಂದರೆ ಸರಿ. ಇದನ್ನು ಬಿಟ್ಟು ಬೇರೆ ವಿಚಾರ ನನಗೆ ತಿಳಿದಿಲ್ಲ ಎಂದರೆ ಸರಿ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ.ದಿಃ 02-07-2025.